ಬಿಲ್‌ಕುಲ್ ಸಿದ್ಧಳಿರಲಿಲ್ಲ. ಓದಿಕೊಂಡಿದ್ದಾಳೆ ಮಗಳು. ಊರಿಗೆ ಸಮೀಪದ ತಾಲ್ಲೂಕುಕೇಂದ್ರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾಳೆ. ನೋಡಲು ಲಕ್ಷಣವಾಗಿದ್ದಾಳೆ. ಚೆನ್ನಾಗಿ ಗೊತ್ತಿರುವ ಕುಟುಂಬದೊಡನೆ ಸಂಬಂಧ ಜೋಡಿಸಲು ಸರೋಜ ಉತ್ಸುಕಳಾಗಿದ್ದರೆ, ಕೆಲಸಕ್ಕೆ ಸೇರಿ ವರ್ಷ ಕಳೆಯುವುದರಲ್ಲಿ ಮಗಳು ಪ್ರೀತಿಯ ಬಲೆಗೆ ಬಿದ್ದಿದ್ದಾಳೆ. ಅವಳು ಕೆಲಸ ಮಾಡುವ ಸ್ಕೂಲಿನ ಹತ್ತಿರವೇ ಇದ್ದ ಬ್ಯಾಂಕಿನಲ್ಲಿ ಹುಡುಗನಿಗೆ ನೌಕರಿ. ಹಣ ಕಟ್ಟುವುದಕ್ಕೋ, ತೆಗೆದುಕೊಳ್ಳುವುದಕ್ಕೋ ಬ್ಯಾಂಕಿಗೆ ಎಡತಾಕುತ್ತಿದ್ದವಳು ಅಲ್ಲಿದ್ದವನನ್ನು ಮೆಚ್ಚಿದ್ದಾಳೆ. ಹುಡುಗಿಗೆ ಅಮ್ಮನ ಹತ್ತಿರ ತನ್ನ ಅನಿಸಿಕೆ ಹಂಚಿಕೊಳ್ಳಲು ಹಿಂಜರಿಕೆಯೇನಿಲ್ಲ. ಅದು ಅವಳ ಸ್ವಭಾವವಲ್ಲ.

"ಅಮ್ಮಾ, ನಾನು ರಮೇಶ ಅನ್ನೋರನ್ನ ಇಷ್ಟಪಟ್ಟಿದೀನಿ. ಇಬ್ಬರೂ ಮದುವೆಯಾಗ್ಬೇಕು ಅಂದ್ಕೊಂಡಿದೀವಿ..." ನೇರಾನೇರವಾಗಿ ಹೇಳಿದ್ದಳು ಹುಡುಗಿ. 'ಯಾರೇ? ಏನೇ? ಯಾವ ಊರು? ಯಾವ ಜಾತಿ?' ಕೆದಕಲು ಹೋದರೆ ಕ್ಯಾರೇ ಅನ್ನಲಿಲ್ಲ ಮಗಳು.

"ಅದೆಲ್ಲಾ ಕಟ್ಗಂಡು ಏನಾಗ್ಬೇಕು? ಒಬ್ರನ್ನೊಬ್ರು ಇಷ್ಟಪಟ್ಟಿದೀವಿ..." ಪ್ರೀತಿಯ ಎದುರು ಮತ್ಯಾವುದೂ ದೊಡ್ಡದಲ್ಲವೆಂಬಂತೆ ಘೋಷಿಸಿಬಿಟ್ಟಳು ಮಗಳು. ಒರಟು ಹುಡುಗಿ. ಅಮ್ಮನ ಮನ ನೋಯಿಸದಂತೆ ನಡೆದುಕೊಳ್ಳಬೇಕೆಂಬ ಕನಿಷ್ಠ ತಿಳಿವಳಿಕೆ ಯಾವತ್ತೂ ರೂಢಿಸಿಕೊಂಡವಳಲ್ಲ. 'ಅಪ್ಪನನ್ನು ಕಾಣದ ಮಗು ಎಂದು ಕನಿಕರಿಸಿ ಎದೆಗಪ್ಪಿಕೊಂಡು ಸಾಕಿದ್ದು ದುಬಾರಿಯಾಯ್ತು. ತೀರಾ ವಿರೋಧಿಸಲು ಹೋದರೆ ತನ್ನ ಬುಡಕ್ಕೇ ಬರುತ್ತದೆ' ಎನ್ನುವ ಸತ್ಯ ಸರೋಜನಿಗೆ ಗೊತ್ತಿದೆ. 'ಎಲ್ಲಾ ನೋಡಿ, ಕೇಳಿ ನಿನ್ನ ಮದುವೆ ಮಾಡಿದ್ದಲ್ವಾ? ಏನಾಯ್ತು ಆಮೇಲೆ?'

ಅವಳಿಂದ ಏನನ್ನೂ ಮುಚ್ಚಿಟ್ಟಿಲ್ಲ ಸರೋಜ. ಆದರೆ, ತಿಕ್ಕಲು ತಿರುಗಿದಾಗ ಅಮ್ಮನನ್ನು ವಿರೋಧಿಸಲು ಮಗಳು ಕಿಂಚಿತ್ತೂ ಹಿಂಜರಿಯುವುದಿಲ್ಲ. ಅವಳ ಇಷ್ಟಕ್ಕೆ ವಿರೋಧವಾಗಿ ಏನೇ ನಡೆದರೂ, ಸರೋಜ ವಿರೋಧದ ಒಂದು ಮಾತಾಡಿದರೂ ಮುಲಾಜಿಲ್ಲದೆ ಹೇಳಿಬಿಡುತ್ತಾಳೆ, 'ಸರಿಯಿಲ್ಲ ನೀನು. ಅದಕ್ಕೇ...

★★★

'ಸರಿಯಿಲ್ಲ ನೀನು, ಅದಕ್ಕೇ... ಎನ್ನುವುದರ ಮುಂದೆ ಏನನ್ನು ಸೇರಿಸಿಕೊಳ್ಳಬೇಕೆಂದು ಒದ್ದಾಡಿದ್ದಾಳೆ ಸರೋಜ. ಯಾಕೆ ಹೀಗೆ ಮಗಳು ಕಣ್ಣಲ್ಲಿ ರಕ್ತ ಇಲ್ಲದವಳಂತೆ ಮಾತಾಡುತ್ತಾಳೆ ಎಂದು ಮೊದಮೊದಲಲ್ಲಿ ಅವಳು ವಿಪರೀತವಾಗಿ ತಲೆ ಕೆಡಿಸಿಕೊಂಡಿದ್ದಿತ್ತು. ತಲೆನೋವಿನಿಂದ ಒದ್ದಾಡುತ್ತಿದ್ದುದಿತ್ತು. ಅಪ್ಪ ಜೊತೆಗಿಲ್ಲದ ಅನಾಥಭಾವ ಮಗಳನ್ನು ಕಾಡುತ್ತಿರಬಹುದು. ತಂದೆ ಇಲ್ಲದೆ ಬೆಳೆದವಳು ಆ ಕೊರತೆ ಕಾರಣವಾಗಿ ಸ್ವಭಾವದಲ್ಲಿ ವೈಪರೀತ್ಯ ಬೆಳೆಸಿಕೊಂಡಿರಬಹುದು. ತೀರಾ ಸಸಾರಕ್ಕೆ ಸಿಗುವ ಅಮ್ಮ ಎಂದರೆ ಸದರ ಬೆಳೆದು ನಾಲಿಗೆಗೆ ಲಗಾಮು ಹಾಕುವುದನ್ನು ಮರೆತಿರಬಹುದು. ಅಥವಾ ಅಮ್ಮ ಹೇಳುವ ಬುದ್ಧಿಮಾತು ಹೆಚ್ಚಾಗುತ್ತಿದೆ ಅನಿಸಿದಾಗ ಕಿರಿಕಿರಿಯಾಗುತ್ತಿರಬಹುದು. ಅಮ್ಮ ತನಗೆ ಇಷ್ಟವಿಲ್ಲದ ನಡತೆ ಕಂಡಾಗ ಬೈಯುತ್ತಾಳೆಂಬುದೇ ದೊಡ್ಡ ಪುಕಾರು ಆಗಿರಬಹುದು. ಅಥವಾ ಹುಟ್ಟುಗುಣದಲ್ಲೇ ಸಿಡುಕು ಅನ್ನುವುದು ಸರ್ವೇಸಾಧಾರಣದ್ದಾಗಿರಬಹುದು. ಇದ್ದನಲ್ಲ ಅವನು ಹೀಗೇ... ಅವನು ಹೇಳಿದ್ದೇ ನಡೆಯಬೇಕು. ಅವನು ಹೇಳಿದ್ದೇ ಕೇಳಬೇಕು.

★★★

ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರತಿಯೊಬ್ಬರಿಗೂ ಅವರದೇ ಆದ ಸಕಾರಣಗಳಿರುತ್ತವೆ. ಕೆಲವೊಮ್ಮೆ ತಮ್ಮ ನಡವಳಿಕೆ ತಪ್ಪು ಎಂದು ಗೊತ್ತಿದ್ದರೂ ಅದನ್ನು ಒಪ್ಪಿಕೊಳ್ಳಲು ಅಹಂನಂತಹದೇನೋ ಅಡ್ಡ ಬರುತ್ತದೆ. ತಾವೇ ಸರಿಯೆಂದು ಸಾಧಿಸಲು ಪ್ರತಿಷ್ಠೆ